ದಿನಾಂಕಃ **03-06-2023** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎಸ್ ಎಸ್ ವಕೀಲರಿಂದಃ

ವ್ಯಾಜ್ಯ ಇರುವುದು 13 ಅಡಿ ಅಗಲ 30 ಅಡಿ ಉದ್ದ ಇದೆ. ದಾವಾ ಸ್ವತ್ತು ನನ್ನ ಹೆಸರಿನಲ್ಲಿ ಇದೆ. ನಿಪಿ 1 ಯಶೋದಮ್ಮ ಎಂಬುವವರ ಹೆಸರಿನಲ್ಲಿ ಇದೆ. ನಿಪಿ 1 ರಲ್ಲಿ ತೋರಿಸಿರುವ ಜಾಗ ವ್ಯಾಜ್ಯದ ಜಾಗ ಅಲ್ಲ ಎಂದರೆ ಸರಿ . ನಿಪಿ 1 ನ್ನು ಯಾಕೆ ಹಾಜರು ಮಾಡಿದ್ದೀರಿ ಎಂದು ಪ್ರಶ್ನಿಸಿದಾಗ ಸಾಕ್ಷಿ ಬೇರೆ ದಾಖಲೆಗಳ ಜೊತೆ ಸೇರಿಕೊಂಡಿದೆ ಅದಕ್ಕೆ ಹಾಜರುಪಡಿಸಿದ್ದೇನೆ ಎಂದರು. ನಿಪಿ 2 ಯಾಕೆ ಹಾಜರು ಪಡಿಸಿದ್ದೀರ ಎಂದು ಪ್ರಶ್ನಿಸಿದಾಗ ಸಾಕ್ಷಿ ಸದರಿ ಏರಿಯಾನಲ್ಲಿ ನಮಗೆ ಬರುವ ಜಾಗ ಇದೆ ಎಂದು ತೋರಿಸಲು ಅದನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ನಿಪಿ 4 ನ್ನು ತೋರಿಸಿ ನಂಬರಿನಲ್ಲಿ ತಿದ್ದುಪಡಿ ಆಗಿದೆ ಎಂದರೆ ಸಾಕ್ಷಿ ಅದರ ಮೇಲೆ ನಂಬರ್ ಬರೆದಿದ್ದಾರೆ ತಿದ್ದುಪಡಿ ಅಲ್ಲ ಎಂದರು. ದಾವಾ ಸ್ವತ್ತು ಮೊದಲು ಇ ಡಿವಿಜನ್ ಇತ್ತು ಈಗ ತಮಿಳು ಕಾಲೊನಿ ನಲ್ಲಿ ಇದೆ. ದಾವಾ ಸ್ವತ್ತು ಇರುವ ವಾರ್ಡ್ ನಂಬರ್ ನನಗೆ ಗೊತ್ತಿಲ್ಲ. ಸದರಿ ವಾರ್ಡ್ ನಂಬರಿನಲ್ಲಿ ನಮಗೆ ಸೇರಿದ ಒಂದೇ ಆಸ್ತಿ ಇದೆ. ನನ್ನ ಹೆಂಡತಿಯಾದ ಯಶೋದಮ್ಮನ ಹೆಸರಿನಲ್ಲಿರುವ ನಿವೇಶನ ಅದೇ ವಾರ್ಡಿನಲ್ಲಿ ಬರುತ್ತದೆ. ಮೊದಲು ಅಸ್ಸೆಸ್ಮೆಂಟು ನನ್ನ ತಂದೆ ಹೆಸರಿಗೆ ಬಂದಿತ್ತು ಅದಾದ ನಂತರ ದಾವಾ ಸ್ವತ್ತು ನನ್ನ ಹೆಸರಿಗೆ ಬಂತು. ನಾನು ವಿವೇಕಾನಂದ ನಗರದಲ್ಲಿ ವಾಸವಿದ್ದೆ. ವಿವೇಕಾನಂದ ನಗರದಲ್ಲಿ ಇರುವ ಆಸ್ತಿ ನನ್ನ ಮಗನಿಗೆ ಸೇರಿದ್ದು ನನ್ನ ಮಗನಿಗೆ ಸೇರಿದ್ದು. ನಿಪಿ 14 ಲ್ಲಿ ಕ್ಯಾನ್ಸಲ್ ಮಾಡಿರುವ ಗೆರೆ ಯಾರು ಹೊಡೆದಾಕಿದ್ದಾರೆ ಎಂದು ಕೇಳಿದಾಗ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ 15 ಯಾವ ಆಸ್ತಿಗೆ ಸಂಬಂದಪಟ್ಟಿದ್ದು ಎಂದು ಪ್ರಶ್ನಿಸಿದಾಗ ಸಾಕ್ಷಿ ದಾವಾ ಸ್ವತ್ತಿಗೆ ಸಂಬಂಧಪಟ್ಟಿರುವ ದಾಖಲಾತಿಯಾಗಿರುತ್ತದೆ ಅದು ಖಾತಾ ನಕಲು ಆಗಿರುತ್ತದೆ. ನಿಪಿ 15 ರಲ್ಲಿ ಆಸ್ತಿ ತೆರಿಗೆ ನಿರ್ಧರಣಾ ವರ್ಷ ಅಂತ ಇರುವ ಕಾಲಂ ನಲ್ಲಿ 1736 ಎಂದು ನಮೂದಾಗಿದೆ ಎಂದರೆ ಸಾಕ್ಷಿ ಅದು ನಗರಸಭೆಯ ನಂಬರು ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ 27-30 ರಲ್ಲಿ ಮನೆಯನ್ನು ಕಟ್ಟಿದ್ದೇವೆ 13-30 ಪಾಲು ನಿವೇಶನವಾಗಿದೆ. ಖಾಲಿ ನಿವೇಶನ ಇದೆ ಎಂದು ತೋರಿಸಲು ಖಾತಾ ಎಕ್ಸ್ಟ್ರಾಕ್ಟ್ ನಲ್ಲಿ ನಮೂದಾಗಿದೆ. 2 ನೇ ಪ್ರತಿವಾದಿಯು ಒಂದನೇ ಪ್ರತಿವಾದಿಯ ಮಗಳು ಎಂದರೆ ಸರಿ . 1 ನೇ ಪ್ರತಿವಾದಿಯ ಹೆಸರಿನಲ್ಲಿ ನಿವೇಶನ ಮಂಜೂರಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮನೆಯನ್ನು ಕಟ್ಟಿಕೊಂಡು ತಮಿಳು ಕಾಲೊನಿಯಲ್ಲಿ 20 ವರ್ಷದಿಂದ ವಾಸವಿದ್ದಾರೆ ಎಂದರೆ ಸರಿ . ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಒಂದನೇ ಪ್ರತಿವಾದಿ ಕಾಣುತ್ತಿದ್ದಾರೆ ಎಂದರೆ ಸರಿ ಸಾಕ್ಷಿ ಒಂದನೇ ಪ್ರತಿವಾದಿಯವರನ್ನು ಗುರುತಿಸಿರುವುದರಿಂದ ನಿಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೋವನ್ನು ತೋರಿಸಿ ಆರೆಂಜ್ ಬಣ್ಣದಲ್ಲಿ ಇರುವ ಮನೆಯ ಪಕ್ಕದಲ್ಲಿ ಖಾಲಿ ಜಾಗ ಇದೆ ಅದೇ ಜಾಗಕ್ಕೆ ವ್ಯಾಜ್ಯ ಹಾಕಿದ್ದೇವೆಂದರೆ ಸರಿ . ಸದರಿ ಜಾಗವನ್ನು ಒತ್ತುವರಿ ಮಾಡುತ್ತೇನೆ ಎಂದು ಮತ್ತು ಮನೆಯನ್ನು ಸದರಿ ಜಾಗದಲ್ಲಿ ಕಟ್ಟಲು ತೊಂದರೆ ಕೊಡುತ್ತಿದ್ದಾರೆ ಎಂದರು ಸಾಕ್ಷಿ ಸದರಿ ಫೋಫೋವನ್ನು ನೋಡಿ ಗುರುತಿಸುವುದರಿಂದ ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ಪ್ರತಿವಾದಿಯವರು ಶಡ್ ಕಟ್ಟಿರುವ ಜಾಗ ಬೇರೆಯವರದು ಸಾಕ್ಷಿ ಸದರಿ ಶಡ್ ನ್ನು ಗುರುತಿಸಿರುವುದರಿಂದ ನಿಡಿ 3 ಎಂದು ಗುರುತಿಸಲಾಯಿತು. ನಿಡಿ 3 ರಲ್ಲಿ ಕಾಣಿಸಿರುವ ಕೆಳಗಡೆ ಹಾಕಿರುವ ಕಲ್ಲುಗಳು ಶಡ್ ವರೆಗೂ ಇದೆ ಎಂದರೆ

ಸಾಕ್ಷಿ ಸದರಿ ಕಲ್ಲನ್ನು ನಾನು ಹಾಕಿರುತ್ತೇನೆ ಮತ್ತು ಅದರಲ್ಲಿ ಕಾಣಿಸಿರುವ ಶಡ್ ಗೂ ನನಗೂ ಸಂಬಂಧ ಇಲ್ಲ ಎನ್ನುತ್ತಾರೆ. ನಿಡಿ 3 ರಲ್ಲಿ ಕಾಣಿಸಿರುವ ದಾರಿ ಬಿಟ್ಟು ಬೇರೆ ದಾರಿ ಇಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ನಿಡಿ 1 ನ್ನು ತೋರಿಸಿ ಆ ಪೋಟೋವನ್ನು ಎದುರುಗಡೆಯ ಟೆರೆಸ್ ಮೇಲೆ ನಿಂತು ತೆಗೆದಿರುತ್ತಾರೆ. ನಿಡಿ 1 ರಲ್ಲಿ ಕಾಣಿಸಿರುವ ಜಾಗಕ್ಕೂ ಮತ್ತು ನಿಡಿ 21 ರಲ್ಲಿ ಕಾಣಿಸಿರುವ ಟೆರೆಸ್ ಗೂ 12 ಅಡಿ ಜಾಗ ಇದೆ. ಸಾಕ್ಷಿ ಮುಂದುವರೆದು ಸದರಿ 12 ಅಡಿ ಜಾಗ ರಸ್ತೆ. ಉತ್ತರಕ್ಕೆ ನಮ್ಮ ಮನೆಯ ಪಕ್ಕದಲ್ಲಿ ಯಾರಿಗೆ ಸೇರಿದ ಮನೆ ಇದೆ ಎನ್ನುವುದು ಗೊತ್ತಿಲ್ಲ. ಒಂದನೇ ಪ್ರತಿವಾದಿಗೆ 4 ಜನ ಮಕ್ಕಳು ಇರಬಹುದು ಆದರೆ ನನಗೆ ನಿಖರವಾಗಿ ಗೊತ್ತಿಲ್ಲ. ಪ್ರತಿವಾದಿಗಳಿಗೆ ನಗರಸಭೆಯವರು ಮಂಜೂರು ಮಾಡಿರುವ ಜಾಗವನ್ನು ಬಿಟ್ಟು ಬೇರೆ ಜಾಗ ಇಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಜಯಮ್ಮ ಅವರಿಗೆ ಪುರಸಭೆಯಿಂದ ಪೂರ್ವ ಪಶ್ಚಿಮ 18 ಅಡಿ, ಉತ್ತರ ದಕ್ಷಿಣ 40 ಅಡಿ ಹಕ್ಕುಪತ್ರದಲ್ಲಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದು ನಕಲು ಪತ್ರ ಎನ್ನುತ್ತಾರೆ ಸದರಿ ಮಂಜೂರಾಗಿರುವ ಜಾಗದಲ್ಲಿ ಪೂರ್ವ ಪಶ್ಚಿಮ 8 ಅಡಿ ಉತ್ತರ ದಕ್ಷಿಣ 40 ಅಡಿ ಮನೆ ಕಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದರು. 8 ಅಡಿ ಜಾಗ ನಮಗೆ ಸೇರಿದ ಜಾಗ ಅಲ್ಲ ಅದು ಒಂದನೇ ಪ್ರತಿವಾದಿಗೆ ಸೇರಿದ ಜಾಗ ಎಂದರೆ ಸರಿಯಲ್ಲ. ಜಿಲ್ಲಾ ದಲಿತ ಒಕ್ಕೂಟ ಸಮಿತಿಯವರು ದಿಃ 04.09.2001 ರಲ್ಲಿ ಒಂದು ಕರ ಪತ್ರವನ್ನು ತಯಾರು ಮಾಡಿ ನನ್ನ ವಿರುದ್ಧ ಒಂದು ದಿನ ಧರಣಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಒಂದನೇ ಪ್ರತಿವಾದಿ, ಶಾರದಮ್ಮ, ನರಸಮ್ಮ , ಲಕ್ಷ್ಮಮ್ಮ ಅವರು ನನ್ನ ವಿರುದ್ಧ ಧರಣಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಶ್ರೀ ಎಸ್ ಎಸ್ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು
ತಿಪಟೂರು.